18. ಸೂಪರಿಂಟೆಂಡಿಂಗು ಇಂಜನಿಯರಿಂದ ತಲ್ಪಿದ 1906ನೆ ನವಂಬರ್ 20ನೆ ಮಕ್ರುಂ 6581ನೆ ನಂಬರ್ ಲೆಟರಿನಲ್ಲಿ ಹೊಸಕೋಟೆ ಕೋಟೆ ಕಂದಕದ ಮೇಲೆ ಸೂಲಿಬೆಲೆ ರೋಡಿನಲ್ಲಿ 6, 14 ರೂಪಾಯಿ ಮುಟ್ಟಿಸಿ ಒಂದು ಕಬ್ಬಿಣದ ಸೇತುವೆ ಕಟ್ಟುವದು ಹಾಲಿ ಡಿಸ್ಟ್ರಿಕ್ಟ್ ಫಂಡಿನಲ್ಲಿ ಹಣವಿಲ್ಲವಾಗಿ ಅವಶ್ಯಕತೆ ಕಾಣುವದಿಲ್ಲವೆಂದು ಈ ಪ್ರಾಜೆಕ್ಟನ್ನು ಬಿಟ್ಟುಬಿಡುವ ವಿಚಾರದಲ್ಲಿ ಅಭಿಪ್ರಾಯ ತಿಳಿಸಬೇಕೆಂದೂ ಸದರಿ ಲೆಟರಿನ 2ನೆ ಪ್ಯಾರಾದಲ್ಲಿ ನಮ್ಮೂರಿಸಿರುವ ಮೇರೆ ಎರಡರ ಪ್ರಾಜೆಕ್ಟುಗಳ ಪೈಕಿ ಒಂದು ವಿಧವಾಗಿ ಮಾಡಲು ಅಭಿಪ್ರಾಯ ಪಡುವ ಪಕ್ಷ ಅರೀತಿ ಮಾಡಿಸಲು ಆರ್ಡರ್ ಮಾಡುವದಾಗಿ ಬರಿಸಿದ್ದು ಓದ ಲಾಯಿತು.

ಮೊಬಲಗು ಇತರ ಬಾಬುಗಳಿಗೆ ಅತಿ ಜರೂರಾಗಿ ಬೇಕಾಗಿರುತ್ತೆಯಾಗಿ ಭಾರಿ ಲಾಗೆವಡು ಇಟ್ಟು ಈ ಸೇತುವೆ ಕಟ್ಟುವ ದು ಸದ್ಯಕ್ಕೆ ನಿಲ್ಲಿಸಿಬಿಡಬಹುದೆಂತಲೂ ಬೇಸಿಗೆ ಕಾಲದಲ್ಲಿ ತಿರುಗಾಡುವದಕ್ಕೆ ಅನುಕೂಲವಾಗಿ ಒಂದು ಅಣೆ ಕಟ್ಟಬಹುದೆಂತಲೂ ತೀರ್ಮಾನಿಸಲಾಯಿತು.

ಮುಂದಿನ ಮೀಟಿಂಗು 1907ನೆ ಇಸವಿ ಫೆಬ್ರವರಿ 15ಕ್ಕೆ ನಡಿಯಬೇಕೆಂದು ತೀರ್ಮಾನಿಸಲಾಯಿತು.

ಹೆಚ್. ಹೆಚ್. ಸ್ಪಾರ್ಕ್ಸ್,
ಪ್ರಸಿಡೆಂಟ್.

ಮೈಸೂರು ಡಿಸ್ಟ್ರಿಕ್ಟು.

ಇಸ್ತಿಹಾರ್ ನಾಮಾ. ತಾರೀಖು 25ನೆ ಜನವರಿ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿ ಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಬೊಮ್ಮನಹಳ್ಳಿ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಮಾರ್ಚಿ ಮಾಹೆ 9ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 7ನೆ ಮಕ್ರುಂ 6ನೆ ನಂಬರ್ ಮೈಸೂರ ಗೆಜೆಟ್ಟಿನ IIನೆ ಭಾಗದ 42-43ನೆ ನಂಬರ್ ಪೇಜು ನೋಡತಕ್ಕದ್ದು.

ಇಸ್ತಿಹಾರ್ನಾಮಾ, ತಾರೀಖು 25ನೆ ಜನವರಿ 1907.

ಕೃಷ್ಣರಾಜಪೇಟೆ ತಾಲ್ಲೂಕು ಅಕ್ಕಿಹೆಬ್ಬಾಳು ಹೋಬಳಿಗೆ ಸೇರಿದ ಸರ್ವಮಾನ್ಯ ಲಕ್ಷ್ಮಿಪುರ ಗ್ರಾಮವು, ಸರ್ಕಾರಕ್ಕೆ ಬರಬೇಕಾದ ಬಾಕಿಗೋಸ್ಕರವಾಗಿ ಕೃಷ್ಣರಾಜಪೇಟೆ ತಾಲ್ಲೂಕು ಕಛೇರಿಯಲ್ಲಿ 1907ನೆ ಮಾರ್ಚಿ 9ನೆ ತಾರೀಖು ದಿವಸ ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಫೆಬ್ರವರಿ 7ನೆ ಮಕ್ರುಂ 6ನೆ ನಂಬರ್ ಮೈಸೂರು ಗೆಜೆಟ್ಟಿನ IIನೆ ಭಾಗದ 41-42ನೆ ನಂಬರ್ ಪೇಜು ನೋಡತಕ್ಕದ್ದು.

ಟಿ. ಕೆ. ಸುಂದರರಾಜೈಯ್ಯಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ಹಾಸನ ಡಿಸ್ಟ್ರಿಕ್ಟು.

ಇಸ್ತಿಹಾರ್ನಾಮೆ.

ತಾರೀಖು 25ನೆ ಜನವರಿ 1907ನೆ ಇಸವಿ.

ಅಲೂರು ಸಬ್ ತಾಲ್ಲೂಕು ಕುಂದೂರು ಹೋಬಳಿ ಜೋಡಿ ಸಮಸ್ತರಿಗೆ ಗ್ರಾಮವು ಜೋಡೀದಾರರು ನಾರಣಾಚಾರ್ರು ವ ಗೈರೇರಿಂದ ಬರತಕ್ಕ ಜೋಡಿ ಬಾಕಿಗೋಸ್ಕರವಾಗಿ 1907ನೆ ಇಸವಿ ಮಾರ್ಚಿ ಮಾಹೆ 18ನೆ ತಾರೀಖು ಸೋಮವಾರ ದಿವಿ 11 ಘಂಟೆ ಲಾಗಾಯಿತು ಕುಂದೂರು ವೊಕ್ಕಾಂನಲ್ಲಿ, ಬಹಿರಂಗವಾಗಿ ಹರಾಜು ಮಾಡಿಸಲ್ಪಡುತ್ತೆಂದು ಇದರಿಂದ ಪ್ರಸಿದ್ಧಪಡಿಸಲ್ಪ ಟ್ಟು ಇದೆ.

ಹೆಚ್ಚು ತಪಶೀಲ್ ಬಗ್ಗೆ 1907ನೆ ಇಸವಿ ಜನವರಿ 31ನೆ ಮಕ್ರುಂ ಮೈಸೂರು ಗೆಜೆಟ್ಟಿನ IIನೆ ಭಾಗದ 30—31ನೆ ಪು ಟಗಳನ್ನು ನೋಡತಕ್ಕದ್ದು.

ಎಂ. ಎ. ನಾರಾಯಣಯ್ಯೆಂಗಾರ್,
ಫಾರ್ ಡೆಪ್ಯುಟಿ ಕಮಿಷನರ್.

ತಾರೀಖು 8ನೆ ಫೆಬ್ರವರಿ-1907.

ಸಕಲ ಜನಗಳಿಗೂ ತಿಳಿಯುವ ಬಗ್ಗೆ ಇದರಿಂದ ಪ್ರಕಟಿಸಲ್ಪಡುವದೇನಂದರೆ, (ಇದ್ದರಡಿ ಕಂಡ ತಖ್ತೆಯಲ್ಲಿ ನಮೂದಿಸಿದ ಪ್ರಕಾರ) ಜೋಡೀದಾರರಿಂದ ಸರಕಾರಕ್ಕೆ ಸಲ್ಲತಕ್ಕ ಕಂದಾಯದ ಬಾಕಿ ಸಮಾಧಾನಕ್ಕೋಸ್ಕರ ಕ್ರಮ ಪ್ರಕಾರ ಜಪ್ತಿ ಮಾಡಲ್ಪಟ್ಟಿರುವ ಈ ಕೆಳಗೆ ಕಂಡ ಜೋಡಿ ಗ್ರಾಮವು ಇದ್ದರಡಿ ಕಂಡ ತಖ್ತೆಯಲ್ಲಿ ನಮೂದಿರುವ ಸ್ಥಳದಲ್ಲೂ ಆ ತಾರೀಖಿನಲ್ಲೂ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುವದು. ಮತ್ತು ಸದರೀ ತಾರೀಖಿನಲ್ಲಿ ಬೆಳಿಗ್ಗೆ 11 ಘಂಟೆಗೆ ಹರಾಜು ಪುರು ವಾಗಿ ಉಳಿಕೆ ಯಾವದೂ ಇಲ್ಲದೆ ಗ್ರಾಮವು ಜಡದರಖಾಸ್ತುದಾರರಿಗೆ ಹರಾಜು ನಿಲ್ಲುವದು.

2. ಪರಂತು, ಬಂದು ಗ್ರಾಮವು ಬೇರೆಬೇರೆಯಾಗಿ ಮೆಂಜೂರ್ಮಾಡಲ್ಪಟ್ಟು ವೃತ್ತಿಗಳಾಗಿ ವಿಂಗಡಿಸಲ್ಪಟ್ಟಿದ್ದರೆ, ಡೆಪ್ಯುಟಿ ಕಮಿಷನರವರು ತಮ್ಮ ಯಖ್ತ್ಯಾರೀ ಮೇಲೆ ಪೂರಾ ಗ್ರಾಮಗಳನ್ನು ವಿಕ್ರಯಿಸುವುದಕ್ಕೆ ಬದಲಾಗಿ ಪ್ರತಿ ಬಂದು ವೃತ್ತಿಯನ್ನೂ ಬೇರೆ ಬೇರೆಯಾಗಿ ಹರಾಜು ಹಾಕಿಸುವರು.

3. ಕ್ರಯದಾರರು ಹರಾಜು ಕಾಲದಲ್ಲಿ ಕ್ರಯದ ಮೊಬಲಗು ಪೈಕಿ ಕೇಕಡಾ 25 ರೂಪಾಯಿ ಡಿಪಾಜಿಟ್ ಇಡಬೇಕಾಗಿರುತ್ತೆ. ಕ್ರಯದ ಮೊಬಲಗು ಪೈಕಿ ಬಾಕಿಯನ್ನು ಹರಾಜು ತಾರೀಖು ಲಾಗಾಯಿತು 15 ದಿನಗಳೊಳಗಾಗಿ ಪಾವತಿ ಮಾಡದೆ ಇದ್ದರೆ, ಡಿಪಾಜಿಟ್ ಮೊಬಲಗು ದಂಡವಾಗಿ ತೆಗೆದುಕೊಳ್ಳಲಿಕ್ಕೆ ಗುರಿಪಾಗತಕ್ಕದ್ದು.

4. ಅಂತಾ ಡಿಪಾಜಿಟ್ ಮೊಬಲಗನ್ನು ಕೊಡದೆ ಹೋದರೆ, ಅಥವಾ ಬಾಕಿ ಕ್ರಯದ ಮೊಬಲಗನ್ನು ಪಾವತಿ ಮಾಡದಿದ್ದರೆ ಜಮೀನುಗಳು ಅವ್ವಲ್ ಕ್ರಯದಾರನ ಖರ್ಚಿನಲ್ಲಿ ಪುನಃ ಹರಾಜ್ ಹಾಕಲ್ಪಡುವವು.

5. ಸರ್ಕಾರದ ಹಣ ಕೊಡಲಿಕ್ಕೆ ತಪ್ಪದೆ ಮನುಷ್ಯನಾಗಲೀ ಅವನ ತರಫಿನಲ್ಲಿ ಕೆಲಸ ನಡೆಸುವ ಅಥವಾ ಜಮೀನಿನಲ್ಲಿ ತನಗೆ ಹಕ್ಕುಂಟೆಂಬ ಇತರ ಯಾವ ಮನುಷ್ಯನಾಗಲಿ, ಹರಾಜ್ ಆಗುವದಕ್ಕೆ ಮುಂಚಿತವಾಗಿ ಬಡ್ಡಿಯಾ ಇತರ ಖರ್ಚುಗಳು ದೇಖಿಲ್ ಕಂದಾಯದ ಬಾಕಿ ಮೊಬಲಗನ್ನು ಪೂರಾ ಹಾಜರ್ ಮಾಡಿದಾಗ್ಯೂ ಅಥವಾ ಹಿಂದಿನ ಕಂದಾಯದ ಬಾಕಿ ಮುಂತಾದ್ದು ಪಾವತಿಯಾಗಿರುತ್ತೆಂದು ತೃಪ್ತಿಕರವಾಗಿ ರುಜುವಾತು ಮಾಡಿದಾಗ್ಯೂ ಹರಾಜು ಮುಕ್ತಾಯ ಮಾಡಲ್ಪಡತಕ್ಕದ್ದು.

6. ಡೆಪ್ಯುಟಿ ಕಮಿಷರ್ಯರವರಿಂದ ಮೆಂಜೂರ್ಮಾಡಲ್ಪಡುವ ಪರ್ಯಂತ ಸ್ವತ್ತಿನ ಹರಾಜು ಖಾಯಮುವಾದ್ದಾಗಿರುವದಿಲ್ಲವು.

7. ಕ್ರಯದಾರನು ಕ್ರಯದ ಮೊಬಲಗನ್ನು ಪೂರ್ತಿಯಾಗಿ ಪಾವತಿ ಮಾಡಿ, ಹರಾಜನ್ನು ಡೆಪ್ಯುಟಿ ಕಮಿಷನರವರು ಖಾಯಂಮಾಡಿದ ಕೂಡ್ಲೆ ಗ್ರಾಮವು ಆತನ ಸುಫರ್ದು ಮಾಡಲ್ಪಟ್ಟು, ಕ್ರಯಪತ್ರವನ್ನು ಹೆಸರಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟು, ಡೆಪ್ಯುಟಿ ಕಮಿಷನರವರಿಂದ ರುಜು ಮೊಹರು ಮಾಡೋಣಾದ ಬಂದು ಸರಟಿಫಿಕೇಟು ಆತನಿಗೆ ಕೊಡಲ್ಪಡುವದು. ತಪಸೀಲಿನಲ್ಲಾಗಲಿ ಅಂದಾಜಾ ಬೀಜವರಿ ವಿಷಯದಲ್ಲಾಗಲಿ ಇರುವ ಗಲ್ಲತ್ತುಗಳಿಗೆ ಸರಕಾರದವರು ಜವಾಬುದಾರರಲ್ಲವೆಂದು ಸ್ಪಷ್ಟವಾಗಿ ತಿಳಿಯತಕ್ಕದ್ದು.

8. ಪರಂತು ಸದರೀ ಹರಾಜಿನಿಂದ ನುಕ್ಸಾನಪಟ್ಟುಂತೆ ಎಣಿಸುವ ಜನಗಳು ಹರಾಜ್ ತಾರೀಖು ಲಾಗಾಯಿತು 30 ದಿನಗಳೊಳಗಾಗಿ ಡೆಪ್ಯುಟಿ ಕಮಿಷನರವರಿಗೆ ಅಪ್ಪೀಲ್ ಮಾಡಿಕೊಳ್ಳಲಿಕ್ಕೆ ಸ್ವತಂತ್ರರಿರುತ್ತಾರೆ, ಅಂತಾ ಅಪ್ಪೀಲ್‌ನಲ್ಲಿ ಆಗುವ ಆಖೈರು ಹುಕುಮಿಗೆ ಸದರೀ ಕ್ರಯವು ವಳಪಟ್ಟು ಇರುತ್ತೆ.

ಡಿಸ್ಟ್ರಿಕ್ಟು	ತಾಲ್ಲೂಕು	ಹೋಬ್ಳಿ	ಗ್ರಾಮ.	ಜೋಡಿದಾರರ ಹೆಸರು	ಅಂದಾಜಾ ಬೀಜವರಿ		ಅಂದಾಜು ಜಮೀನು ಯೋಗ್ಯತೆ ಜಿ.	ಸಾಲಿಯಾನಾ ಸರಕಾರಕ್ಕೆ ಕಿಸ್ತಿ ಕೊಡಬೇಕಾದ ಕಿಸ್ತಿ.	ಯಾವ ಬಾಕಿಗೋಸ್ಕರ ಗ್ರಾಮವು ಹರಾಜ್ ಮಾಡಲ್ಪಡುತ್ತೋ ಅಂತಾ ಸರಕಾರದ ಕಂದಾಯದ ಬಾಕಿ.	ಹರಾಜು ತಾರೀಖು ಸ್ಥಳ.
					ಎ.	ಗು.				
							ರೂ. ಆ.	ರೂ.	ರೂ. ಆ. ಪೈ.	
ಹಾಸನ	ಹೊಳೆನರಸೀಪುರ.	ಹೊಸ್ಕೊಪ್ಪಕಾವಲು.	ಕಪ್ಪನಗ್ರಾನು	ನಾರಾಯಣರಾವ್ ಸ್ವೀಕಂಪ್ಪ ಸುಬ್ಬರಾವ್, ಚಾಮಯ್ಯ ನರಸಿಂಗರಾವ್, ರಾಮಸ್ವಾಮಿ.	ಪರಂಪೋಕು	58 21	479 8	193	764 6 1	1907ನೆ ಇಸವಿ ಸೆಪ್ಟೆಂಬರ್ 2ನೆ ತಾರೀಖು ಸೋಮವಾರ ಬೆ॥ 11 ಗಂಟೆ ಲಾ॥ ಹೊಳೆನರಸೀಪುರ ತಾಲ್ಲೂಕು ಕಛೇರಿಯಲ್ಲಿ ಹರಾಜು ಜನರಲ್ ಕಾಮನಾಗಿ ಹರಾಜು ನಡಿಸುವರು ಇತಿ ಅಸಿಸ್ಟಂಟ್ ಕಮಿಷನರು ಹರಾಜ್ ಮಾಸ್ಟರ್.
					ಖುಷ್ಕಿ ...	577 22				
					ತರಿ ...	45 27				
					ಬಾಗಾಯತು	2 12				
					ಜುಮ್ಲಾ ...	684 2				

ಟಿ. ಧರ್ಮರಾಜು ಚೆಟ್ಟಿ,
ಫಾರ್ ಡೆಪ್ಯುಟಿ ಕಮಿಷನರ್.

ಶಿವಮೊಗ್ಗ ಡಿಸ್ಟ್ರಿಕ್ಟು

ಇಸ್ತಿಹಾರ್.

ತಾರೀಖು 21ನೆ ಜನವರಿ 1907.

ಮೈಸೂರು ಸೀಮೆಯ ಲೇಟ್ ಚೀಫ್ ಕಮಿಷನರವರಿಂದ ಕೊಡಲ್ಪಟ್ಟ ತಾರೀಖು 17—4—1867ನೆ ಪುಸ್ತಂ 6ನೆ ನಂಬರು ಭೂವಿಯಲ್ಲಿ ಹೂಳಲ್ಪಟ್ಟ ನಿಧಿಗಳ ಪತ್ತೆವಿಷಯಕವಾದ ಇಸ್ತಿಹಾರನ್ನು ಅನುಸರಿಸಿ ಇದರಿಂದ ಸಮಸ್ತ ಜನಗಳಿಗೂ ತಿಳಿಯುವಂತೆ ಪಡಿಸುವದೇನೆಂದರೆ—